Class-10

# KANNADA

# II

GENERAL EDUCATION DEPARTMENT
SAMAGRA SHIKSHA, KERALA

# ಸಮಗ್ರ ಶಿಕ್ಷಾ ಕೇರಳ

## ಕನ್ನಡ II

## ತರಗತಿ 10

## ಚಟುವಟಿಕೆಯ ಕಾರ್ಡುಗಳು

# ಗುಪ್ತದಾನಿ

1. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ಪದದಲ್ಲಿ ಉತ್ತರಿಸಿರಿ.

ಅ. ಗುಪ್ತದಾನಿ ಪಾಠವನ್ನು ಬರೆದವರು ಯಾರು ?

ಆ. ಗುಪ್ತದಾನಿ ಪಾಠವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?

ಇ. ಗುಪ್ತದಾನಿ ಪಾಠವನ್ನು ಯಾವ ಕೃತಿಯಿಂದ ಆರಿಸಲಾಗಿದೆ ?

ಈ. ಗುಪ್ತದಾನಿ ಎಂಬ ಪಾಠಭಾಗದಲ್ಲಿ 'ಬಲಗೈ ಮಾಡಿದ್ದು ಎಡಗೈಗೆ ತಿಳಿಯಬಾರದು' ಎಂಬ ಸ್ವಭಾವವನ್ನು ಹೊಂದಿದವರು ಯಾರು ?

ಅ . --------------------------

ಆ . --------------------------

ಇ. --------------------------

ಈ. --------------------------

2. ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಅನ್ಯದೇಶೀಯ ಪದಕ್ಕೆ ಸಂವಾದಿಯಾದ ಕನ್ನಡ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

ಅ. ನಾಗರಾಜರು ಹೊಸ ಫ್ರಿಡ್ಜ್ ಕೊಂಡಾಗ ಹಳೆಯದನ್ನು ಸ್ಲಮ್ ನ ಆಫೀಸಿಗೆ ನೀಡಿದರು.

ಆ. ದಿನವೂ ಪೇಪರ್ ಗಳಲ್ಲಿ ನಾವು ಅನೇಕ ಸುದ್ದಿಗಳನ್ನು ಓದುತ್ತೇವೆ.

ಇ. ನಾಗರಾಜರ ಆಫೀಸಿನಲ್ಲಿ ಯಾವುದೇ ಆಡಂಬರ ಇರಲಿಲ್ಲ.

ಈ. ಪಟ್ಟಣಗಳಲ್ಲಿ ದೊಡ್ಡ ದೊಡ್ಡ ಕಂಪೆನಿಗಳು ಕಂಡುಬರುತ್ತವೆ.

ಅ.

ಆ.

ಇ.

ಈ.

3. ಗುಪ್ತದಾನಿ ಪಾಠವನ್ನು ಓದಿರುವಿರಲ್ಲವೇ ? ಅದರಲ್ಲಿ ಬರುವ ಪಾತ್ರಗಳು ಯಾವುವು ? ನಿಮಗಿಷ್ಟವಾದ ಪಾತ್ರ ಯಾವುದು ? ಆ ಪಾತ್ರದ ಪಾತ್ರಚಿತ್ರಣ ಮಾಡಿರಿ.

4. ಕೆಳಗೆ ನೀಡಲಾದ ಗ್ರಾಮ್ಯ ರೂಪದ ಭಾಗಗಳನ್ನು ಶಿಷ್ಟರೂಪಕ್ಕೆ ಪರಿವರ್ತಿಸಿ ಬರೆಯಿರಿ.

ಅ. ಇವ್ರಿಗೆ ನೇಗಿಲ ಹಿಡಿಯಾಕಾಗದು.ಗುದ್ದಲಿ ಸವೆಸಾಕಾಗದು.ಉಣ್ಣಾಕೆ ಮಾತ್ರ ಒಳ್ಳೊಳ್ಳೇದಾಗಬೇಕು.ಇಂಥ ಕಾಲ ಬಂದೋಯ್ತು.

ಆ. ದುಡಿಮೆಯೇ ದೇವ್ರೆಂದು ನಂಬಿದೋನು ನಾನು, ಈ ಇಳಿ ವಯಸ್ನಲ್ಲೂ ದುಡಿದು ತಿನ್ನೋದ್ರಿಂದ ಬದುಕ್ನಾಗ ನೆಮ್ಮದಿ ಐತೆ.

ಇ. ತಪ್ಪು ತಿಳ್ಕೋಬ್ಯಾಡ್ರಿ ಸಾರ್, ಹೆಣ್ಣು ಹೆಂಗಸರಿಗೆ ವ್ಯವಹಾರ ಏನು ಗೊತ್ತಾಗುತ್ತೆ

ಹೇಳಿ? ಮೈ ತುಂಬಾ ಸಾಲ ಆಗಿ ಬಿಟ್ಟಿದೆ. ತೀರಿಸೋಕ ಆಗ್ತಾ ಇಲ್ಲ.ಸಾಲದ ಹಣ ನೆನೆಸಿಕೊಂಡ್ರೆ ರಾತ್ರಿ ನಿದ್ದೆ ಕೂಡಾ ಬರವಲ್ಲದು

| |
|---|
| ಅ.<br><br>ಆ.<br><br>ಇ. |

5. ಕೆಳಗಿನ ಗದ್ಯಭಾಗವನ್ನು ಅರ್ಥಪೂರ್ಣವಾಗುವಂತೆ ಕ್ರಮೀಕರಿಸಿ ಬರೆಯಿರಿ.

ಅಭಯ ಬೇಡಿದವರನ್ನು ರಕ್ಷಿಸುವುದು ಕ್ಷತ್ರಿಯ ಧರ್ಮವೆಂದು ಸಿದ್ದಾರ್ಥನು ಅದರ ಜೀವವನ್ನು ಉಳಿಸಿದನು. ದೇವದತ್ತನು ಆಕಾಶದಲ್ಲಿ ಹಾರುವ ಒಂದು ಹಂಸ ಪಕ್ಷಿಗೆ ಬಾಣ ಹೊಡೆದು ಕೆಳಕ್ಕೆ ಬೀಳಿಸಿದನು. ಎಲ್ಲರೂ ಅವನ ದಯಾಗುಣವನ್ನು ಮನಸಾರೆ ಹೊಗಳಿದರು. ಗಾಯಗೊಂಡ ಪಕ್ಷಿಯು ಸಿದ್ಧಾರ್ಥನ ಮಡಿಲಲ್ಲಿ ಬಿದ್ದು ಅವನನ್ನು ಮೊರೆಹೊಕ್ಕಿತು.

6. 'ಸಾಕೇತರ ಉತ್ತರಕ್ಕಾಗಿ ಕಾಯದೆ ಕೋಣೆಯಿಂದ ಹೊರ ಬಂದು ನಾಗರಾಜ ಅವರ ಫೋಟೊ ಇನ್ನೊಮ್ಮೆ ನೋಡಿ,ಕೊನೆಯ ಬಾರಿ ಆ ಆಫೀಸಿನ ಮೆಟ್ಟಲನ್ನು ಇಳಿದೆ.' - ಇದು ಗುಪ್ತದಾನಿ ಪಾಠದಲ್ಲಿ ಬರುವ ಸುಧಾಮೂರ್ತಿಯವರ ಮಾತುಗಳಲ್ಲವೇ ? ಅಂದು ಲೇಖಕಿ ತನ್ನ ದಿನಚರಿಯಲ್ಲಿ ಏನೇನು ಬರೆದಿರಬಹುದು ? ಊಹಿಸಿ ಬರೆಯಿರಿ.

7. ಬಲಗೈಲಿ ಮಾಡಿದ್ದು ಎಡಗೈಗೆ ತಿಳಿಯಬಾರದು.- ಗುಪ್ತದಾನಿ ಪಾಠದ ನಾಗರಾಜರು ಹೇಳುವ ಮಾತಿದು. ಈ ಮಾತಿನ ವಿಶೇಷತೆ ಏನು ?

8. ಕೆಳಗೆ ಕೊಡಲಾದ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಿರಿ.

ಅ. ಗುರುಗಳು ಮಗೂ ಯಾಕೆ ದುಃಖಿಸುತ್ತೀಯಾ ನಿನ್ನ ಕಷ್ಟಗಳೆಲ್ಲವೂ ಬೇಗನೆ ಪರಿಹಾರವಾಗುತ್ತದೆ ಬೇಸರಿಸಬೇಡ ಎಂಬುದಾಗಿ ಹೇಳಿದರು

ಆ. ಅವನೇನು ಮಹಾಕಲಾವಿದನೇ ಅವನಿಗೆ ಸಂಗೀತ ನೃತ್ಯ ಯಾವುದರಲ್ಲಾದರೂ ಪರಿಣತಿಯಿದೆಯೇ ಆದರೂ ಎಂತಹ ಸೊಕ್ಕು ಎಂದು ಮಂತ್ರಿಗಳು ಹೇಳಿದರು

ಇ. ಮಗಳು ತಂದೆಯನ್ನು ಕರೆದು ಅಪ್ಪಾ ಎಂಥಾ ಹಚ್ಚಹಸುರಾದ ಮನಮೋಹಕ ದೃಶ್ಯ ಇಂಥಾ ನೋಟವನ್ನು ಬೇರೆಲ್ಲಿಯಾದರೂ ಕಂಡಿರುವೆಯಾ ಎಂದು ಕೇಳಿದಳು

| |
|---|
| ಅ.<br><br><br><br>ಆ.<br><br><br><br><br><br>ಇ.<br><br><br><br><br> |

9.ಗುಪ್ತದಾನಿ ಪಾಠದಲ್ಲಿ ಬರುವ ನಾಗರಾಜ ಮತ್ತು ಸಾಕೇತರ ವಿಭಿನ್ನ ವ್ಯಕ್ತಿತ್ವಗಳ ಆಧಾರದಲ್ಲಿ ವ್ಯಕ್ತಿ ಮತ್ತು ಸಮಾಜಸೇವೆ ಎಂಬ ವಿಷಯದ ಕುರಿತು ಒಂದು ಲೇಖನ ಬರೆಯಿರಿ.

10. ನಾಗರಾಜರ ಪುತ್ರ ಸಾಕೇತ್ ಲೇಖಕಿ ಸುಧಾಮೂರ್ತಿಯವರ ಮುಂದೆ ಕೆಲವೊಂದು ನಿಬಂಧನೆಗಳನ್ನಿಟ್ಟಿದ್ದಾನಲ್ಲವೇ ?ಅದು ಸರಿಯೇ ? ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿ ಬರೆಯಿರಿ.

**ಘಟಕ 1 ಜೀವನ ಪ್ರೀತಿ**

# ಎಲ್ಲಿ ಹೋದರೋ ಅವರು ಎಂದು ಬರುವರು ?

1. 'ಎಲ್ಲಿ ಹೋದರೋ ಅವರು ಎಂದು ಬರುವರು ?'
**ಕವನವನ್ನು ಬರೆದವರು ಯಾರು ?**

2.ವೈದೇಹಿ ಎಂಬ ಕಾವ್ಯನಾಮ ಇರುವ ಸಾಹಿತಿ ಯಾರು ?

3.'ಎಲ್ಲಿ ಹೋದರೋ ಅವರು ಎಂದು ಬರುವರು ?' ಈ ಕವನದಲ್ಲಿ 'ವೈದೇಹಿ' ಅವರು ಸೂಚಿಸಿದ ಮಹಾನ್ ಸಾಹಿತಿ ಯಾರು ?

4 'ದಣಿವೆನ್ನದ ಯೋಧ
ವೃದ್ಧನಾಗದ ವೃದ್ಧ
ಕನ್ನಡದ ಭೀಷ್ಮ ಪಿತಾಮಹರು' - ಈ ಸಾಲುಗಳಲ್ಲಿ ಯಾರ ಬಗ್ಗೆ ಹೇಳಲಾಗಿದೆ?

5 'ಎಲ್ಲಿ ಹೋದರೋ ಅವರು ಎಂದು ಬರುವರು ?' ಕವನಕ್ಕೆ ಬೇರೊಂದು ಶೀರ್ಷಿಕೆ ನೀಡಿರಿ. ಆ ಶೀರ್ಷಿಕೆ ನೀಡಲು ಕಾರಣವೇನು ಎಂದು ಸಮರ್ಥಿಸಿರಿ.

| ಶೀರ್ಷಿಕೆ : |
|---|

| ಕಾರಣ : |
|---|

6 'ಎಲ್ಲಿ ಹೋದರೋ ಅವರು ಎಂದು ಬರುವರು ?'ಎಂಬ ಕವನದ ಈ ಕೆಳಗಿನ ಸಾಲುಗಳ ಅರ್ಥವೇನು ? ಬರೆಯಿರಿ.

'ನಡೆದ ನಡಿಗೆಯ ನುಡಿ
ನುಡಿಯ ನಡಿಗೆಯ ಭಾಷೆ.'

| ಸಾಲುಗಳ ಅರ್ಥ |
|---|

7. 'ಎಲ್ಲಿ ಹೋದರೋ ಅವರು ಎಂದು ಬರುವರು ?' ಕವನದ ಈ ಕೆಳಗಿನ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಶತಮಾನದಂಗಳದಿ ಆಡಿ ಆಡೀ ಮಗು
ಕಣ್ಮುಚ್ಚಿ ಮಲಗಿಹುದು ನಿದ್ದೆ ಹೊದ್ದು.

| ಸಾಲುಗಳ ಸ್ವಾರಸ್ಯ |
| --- |
| |

8. 'ಎಲ್ಲಿ ಹೋದರೋ ಅವರು ಎಂದು ಬರುವರು ?' ಕವನದ ಈ ಕೆಳಗಿನ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಗರ್ಜಿಸಲು ಬಲ್ಲರು
ಪಿಸು ನುಡಿಯಲೂ
ಕುಣಿತವನ್ನು ಬಲ್ಲಂತೆ ಕತೆ ಹೇಳಲೂ

| ಸಾಲುಗಳ ಸ್ವಾರಸ್ಯ |
| --- |
| |

9. ಕೆಳಗೆ ಕೊಡಲಾದ ಕವನದ ಸಾಲುಗಳ ಆಶಯವನ್ನು ಬರೆಯಿರಿ.

ಪ್ರಾಮಾಣಿಕತೆಗೆ ಮೊದಲ ಮಣೆ ಇಡುವವರು
ಅನುಭವದ ನಾಭಿಯಲ್ಲಿ ಸೃಷ್ಟಿ ಹಟದವರು
ಯಕ್ಷಲೋಕದ ಬ್ರಹ್ಮ
ಸಿಂಹ-ಸುಂದರರು

ಸಾಲುಗಳ ಆಶಯ

10. ಕೆಳಗೆ ಕೊಟ್ಟ ಕವನದ ಸಾಲುಗಳ ಆಧಾರದಲ್ಲಿ ಕನ್ನಡಿಗರ ನಿಶ್ಶಬ್ದ ಕಂಬನಿಗೆ ಕಾರಣವೇನು ?ವಿವರಿಸಿ ಬರೆಯಿರಿ.

ಅರಸುತಿದೆ ಕಣ್ಣು ಕಾರಂತರನ್ನು
ಸಭೆ ತುಂಬಿ ಬರುವ ಆ ಪುಣ್ಯವನ್ನು
ಭಾಗ್ಯ ಕಳೆಯುವ ನೋವು ಬಲ್ಲಿರಾ
ಕನ್ನಡಿಗರನು ಕೇಳಿ ಕನ್ನಡದ ಚಪ್ಪರದಿ
ನಿಶ್ಶಬ್ದ ಕಂಬನಿಗೆ ಬೇಕೆ ವಿವರ

| ವಿವರಣೆ |
| --- |
| |

11. 'ಎಲ್ಲಿ ಹೋದರೋ ಅವರು ಎಂದು ಬರುವರು ?' ಕವನದ ಕೆಳಗಿನ ಸಾಲುಗಳ ಆಶಯವನ್ನು ಬರೆಯಿರಿ.

ಇದ್ದಷ್ಟು ದಿನವೂ ಕ್ಷಣವೇ ಧನವೆಂದು
ಜ್ಞಾನ ಕಾನನದಲ್ಲಿ ಅಡ್ಡಾಡಿದವರು
ತಿಳಿದಿಲ್ಲ ತಿಳಿವನ್ನು ಹಂಚಿಯೂ ಹಂಚಿಯೂ
ತಿಳಿವ-ತಿಳಿಸುವ ದಾಹ ತೀರದವರು
ಅಜ್ಞಾನದೆದುರು ಮರುಗಿದವರು

| ಆಶಯ |
|---|
| |

12. ಕೆಳಗೆ ನೀಡಲಾದ ಮಾಹಿತಿಗಳ ಆಧಾರದಲ್ಲಿ ಖ್ಯಾತ ಸಾಹಿತಿ ಶಿವರಾಮ ಕಾರಂತರ ವ್ಯಕ್ತಿ ಪರಿಚಯ ಬರೆಯಿರಿ.

ಹೆಸರು: ಶಿವರಾಮ ಕಾರಂತರು.
ಜನನ: 10-10-1902.
ಸ್ಥಳ: ಉಡುಪಿ ಜಿಲ್ಲೆಯ ಕೋಟ.
ತಂದೆ: ಶೇಷ ಕಾರಂತ
ತಾಯಿ: ಲಕ್ಷ್ಮಿ ಕಾರಂತ.
ವಿದ್ಯಾಭ್ಯಾಸ: ಕುಂದಾಪುರದಲ್ಲಿ ಪ್ರೌಢಶಾಲಾ ವ್ಯಾಸಂಗ.
1921 ರಲ್ಲಿ ಅಸಹಕಾರ ಚಳುವಳಿಯಲ್ಲಿ ಭಾಗಿಯಾಗಿ ಕಾಲೇಜು ಶಿಕ್ಷಣಕ್ಕೆ ವಿದಾಯ.
ರಚಿಸಿದ ಕೃತಿಗಳು:
ಕಾದಂಬರಿಗಳು-ಮರಳಿ ಮಣ್ಣಿಗೆ, ಬೆಟ್ಟದ ಜೀವ, ಕುಡಿಯರ ಕೂಸು, ಚೋಮನದುಡಿ, ಸರಸಮ್ಮನ ಸಮಾಧಿ, ಮೂಕಜ್ಜಿಯ ಕನಸುಗಳು ಇತ್ಯಾದಿ.
ಕವನಸಂಕಲನಗಳು: ರಾಷ್ಟ್ರಗೀತ ಸುಧಾಕರ, ನೀಳ್ಗವನಗಳು.
ನಾಟಕಗಳು: ವಿಜಯದಶಮಿ, ಡುಮಿಂಗೊ, ಕರ್ಣಾರ್ಜುನ, ಅವಳಿ ನಾಟಕಗಳು, ಗರ್ಭಗುಡಿ, ಗೊಂಬೆಯ ಮನೆ ಇತ್ಯಾದಿ.
ಇತರ ಕೃತಿಗಳು: ಬಾಲ ಸಾಹಿತ್ಯಗಳು, ಸಿರಿಗನ್ನಡ ಅರ್ಥಕೋಶ, ಕನ್ನಡದ ನಿಘಂಟು, ಯಕ್ಷಗಾನ ಬಯಲಾಟ, ಹುಚ್ಚು ಮನಸ್ಸಿನ ಹತ್ತು ಮುಖಗಳು.... ಇತ್ಯಾದಿ
ಪ್ರಶಸ್ತಿಗಳು: ಯಕ್ಷಗಾನ ಬಯಲಾಟ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ.
ಗೌರವ ಡಿ.ಲಿಟ್.
ಕೇಂದ್ರ ಸಂಗೀತ ನಾಟಕ ಅಕಾಡೆಮಿ ಗೌರವ ಫೆಲೋಶಿಪ್
ಮೂಕಜ್ಜಿಯ ಕನಸುಗಳು ಕೃತಿಗೆ ಜ್ಞಾನಪೀಠ ಪ್ರಶಸ್ತಿ..... ಇತ್ಯಾದಿ
ನಿಧನ : 9.12.1997

## ಡಾ. ಶಿವರಾಮ ಕಾರಂತ

13. 'ದಣಿವೆನ್ನದ ಯೋಧ, ವೃದ್ಧನಾಗದ ವೃದ್ದ'
'ಘರ್ಜಿಸಲು ಬಲ್ಲರು, ಪಿಸು ನುಡಿಯಲೂ'
'ತಿಳಿವ-ತಿಳಿಸುವ ದಾಹ ತೀರದವರು'
'ಭೌತಲೋಕದ ದೊಡ್ಡ ಭಕ್ತ'
ಇವು 'ಎಲ್ಲಿ ಹೋದರೋ ಅವರು ಎಂದು ಬರುವರು ?' ಕವನದ ಸಾಲುಗಳು. ಈ ಕವನದ ಆಧಾರದಲ್ಲಿ ವೈದೇಹಿಯವರು ಶಿವರಾಮ ಕಾರಂತರ ವ್ಯಕ್ತಿತ್ವವನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಬರೆಯಿರಿ.

# ಪಾಠ: 3 ನೀರು

1. ‘ನೀರು’ ಕತೆಯನ್ನು ಬರೆದವರು ಯಾರು ?

2. ‘ನೀರು’ ಪಾಠ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?

3. ‘ನಾಳೆಂದತ್ಲಾಗೆ ನಮ್ಮನೆಗೆ ನೀರಿಗೆ ಬರಬಾರದು’ ಈ ಮಾತನ್ನು ಹೇಳಿದವರು ಯಾರು ?

4. ‘ನೀರು’ ಕತೆಯಲ್ಲಿ ಐತ ಮತ್ತು ಮಾಲಿಂಗರ ನಡುವಿನ ಬಾಂಧವ್ಯದ ಕೊಂಡಿ ಕಳಚಿ ಹೋಗಲು ಕಾರಣ ಯಾವುದು ?

5. ಸಹಬಾಳ್ವೆಯ ಮಹತ್ವವನ್ನು ಸಾರುವ ಒಂದು ಘೋಷಣ ವಾಕ್ಯವನ್ನು ರಚಿಸಿರಿ.

6. ಕೆಳಗಿನ ವಾಕ್ಯದಲ್ಲಿ ಅಡಿಗೆರೆ ಎಳೆದ ನುಡಿಗಟ್ಟನ್ನು ಉಪಯೋಗಿಸಿಕೊಂಡು ಬೇರೊಂದು ವಾಕ್ಯ ರಚಿಸಿರಿ.

ಹದಿನಾರು ಕೋಲು ಆಳದಲ್ಲಿನ ವೃತ್ತಾಕಾರದ ತಳದಲ್ಲಿ ಮೂರು ನಾಲ್ಕು ಕಡೆಯಿಂದ ಒರತೆ ನೀರು ಚಿಮ್ಮಿ ಬಂದಾಗ ಮಾಲಿಂಗನ ಹೃದಯ ತುಂಬಿ ಬಂತು.

7. ಕೆಳಗೆ ಕೊಟ್ಟ ಸಂಯುಕ್ತ ವಾಕ್ಯವನ್ನು ಸರಳವಾಕ್ಯಗಳಾಗಿ ವಿಭಜಿಸಿ ಬರೆಯಿರಿ.

ಜಗಲಿಯಲ್ಲಿ ಕುಳಿತು ಏನೋ ಆಲೋಚಿಸುತ್ತಿದ್ದ ಮಾಲಿಂಗನ ಮುಖದಲ್ಲಿ ಮಂದಹಾಸ ಮಿನುಗಿತು.

*

*

8. ಕೆಳಗೆ ಕೊಟ್ಟ ಸರಳ ವಾಕ್ಯಗಳನ್ನು ಸಂಯುಕ್ತ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

ಸೇರಿದವರೆಲ್ಲ ಸಕ್ಕರೆ ನೀರನ್ನು ಕುಡಿದರು. ಅವರು ಸಂತಸದಿಂದ ಮಾಲಿಂಗನನ್ನು ಅಭಿನಂದಿಸಿದರು.

| * |
|---|

9. ಕೆಳಗೆ ಕೊಟ್ಟಿರುವ ಗ್ರಾಮ್ಯ ಭಾಷೆಯ ವಾಕ್ಯ ಗಳನ್ನು ಶಿಷ್ಟರೂಪಕ್ಕೆ ಪರಿವರ್ತಿಸಿರಿ.

'ಯಾ..ಅಲ್ಲಾ .... ಭೂಮಿಯಲ್ಲಿ ಹರಿವ ನೀರು, ತೆಗೀಬೇಡ ಅಂತಾರಾ... ಒಂದು ಗುಟುಕು ಕುಡಿವ ನೀರಿಗೆ ತಡೆ ಒಡ್ಡಾರಾ....ಭಾಷೆಯಿಲ್ಲ ಅವನಿಗೆ.... ನಮ್ಮಲ್ಲಿ ನೀರು ಇರುವವರೆಗೆ ಎಷ್ಟು ಬೇಕಾದ್ರೂ ತೆಕ್ಕೋ'

| ಶಿಷ್ಟರೂಪ |
|---|

10.ಕೆಳಗೆ ಕೊಟ್ಟ ಭಾಗವನ್ನು ಶಿಷ್ಟರೂಪಕ್ಕೆ ಪರಿವರ್ತಿಸಿರಿ.

‘ಏನ್ ಏಳ್ಳಿ ಮಗಾ! ಈಗ ಮಳೆಗಾಲ ಆದ್ರೂನೂ ಕುಡ್ಯೋಕೇ ನೀರಿಲ್ಲ. ನಂಗೆ ವಯಸ್ಸಾತು ನೋಡು, ನಡ್ಯೋಕೇ ಆಗಂಗಿಲ್ಲ. ಒಂದ್ಕೊಡ ನೀರು ತರ್ಬೇಕಿದ್ರೂ ನನ್ ಕೈಲಾಗಲ್ಲ. ಇಲ್ಲೊಂದು ಸರ್ಕಾರಿ ಬಾವಿ ಐತೆ ನೋಡು. ಆದ್ರೂ ಅದು ಇದ್ದೂ ಇಲ್ದಂಗೆ. ನಮ್ಮಂತಾ ಮುದ್ಕೀರಿಗೆ ಸಾಯ ಮಾಡ್ಬೇಕಲ್ಲ ಯಾರಾದ್ರೂ. ದಿನಕ್ಕೊಮ್ಮೆಯೋ ಎಲ್ಡು ದಿನಕ್ಕೊಮ್ಮೆಯೋ ಯಾರಾದ್ರೂ ಬಂದು ಸಾಯ ಮಾಡ್ತವ್ರೆ. ಅದು ನನ್ನ ಯಾವ್ದೋ ಜನುಮದ ಪುಣ್ಯ ನೋಡು.

| ಶಿಷ್ಟರೂಪ |
| --- |
| |

11. ಸ್ವಂತ ಬಾವಿಯ ನೀರಿಗಾಗಿ ಹಲವು ವರ್ಷಗಳಿಂದ ಕಾಯುತ್ತಾ ನೀರು ಸಿಕ್ಕಿದಾಗ ಸಂತೋಷಗೊಳ್ಳುವ 'ಮಾಲಿಂಗ'ನ ಕುರಿತು 'ನೀರು' ಕತೆಯಲ್ಲಿ ಓದಿರುವಿರಿ. ಈ ಕತೆಯ ಆಧಾರದಲ್ಲಿ ಮಾಲಿಂಗನ ಪಾತ್ರಚಿತ್ರಣ ಮಾಡಿರಿ.

| ಮಾಲಿಂಗನ ಪಾತ್ರಚಿತ್ರಣ |
| --- |
| |

12.ನಿಮ್ಮ ಶಾಲೆಗೆ ಆಡಳಿತ ಸಂಸ್ಥೆಯ ವತಿಯಿಂದ ಕೊಡಮಾಡಿದ ಕುಡಿಯುವ ನೀರಿನ ಯೋಜನೆಯ ಉದ್ಘಾಟನೆ ಶಾಲೆಯಲ್ಲಿ ನಡೆಯಿತು ಎಂದು ಭಾವಿಸಿರಿ. ಅದರ ಉದ್ಘಾಟನೆಯ ಪತ್ರಿಕಾ ವರದಿಯನ್ನು ತಯಾರಿಸಿರಿ.

(ಉದ್ಘಾಟಕರು, ಅಧ್ಯಕ್ಷತೆ, ಶುಭ ಹಾರೈಕೆ, ಸ್ವಾಗತ, ಧನ್ಯವಾದ ಇತ್ಯಾದಿ ವಿವರಗಳಿರಲಿ)

ಪತ್ರಿಕಾ ವರದಿ

13. ''ಎಷ್ಟು ವರ್ಷಗಳ ಆಸೆ! ತನ್ನ ಸ್ವಂತ ಮಣ್ಣಿನ ಒಡಲಿನಿಂದ ಒಂದು ಹನಿ ನೀರು ಕುಡಿವ ಬಯಕೆ!"

''ನಾಳೆಂದತ್ಲಾಗೆ ನಮ್ಮನೆಗೆ ನೀರಿಗೆ ಬರ್ಬಾರ್ದು''

''ನಮ್ಮಲ್ಲಿ ನೀರು ಇರುವವರೆಗೆ ಎಷ್ಟು ಬೇಕಾದ್ರೂ ತೆಕ್ಕೋ.."

"ತಕ್ಕೊಳ್ಳಿ ಮಾವ ಸಕ್ಕರೆ ನೀರು"

"ನಿಮಗೆ ಕುಡಿಯಲು ನೀರು ಕೊಡದ ಪಾಪಿ ನಾನು!"

'ನೀರು' ಕತೆಯಲ್ಲಿ ಬರುವ ಈ ಮಾತುಗಳ ಆಧಾರದಲ್ಲಿ ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

| ಕಥೆಯ ಸಂಕ್ಷಿಪ್ತ ರೂಪ |
| --- |
| |

14. ಐತನು ಮಾಲಿಂಗನ ಮನೆಗೆ ಬಂದು 'ನಾಳೆಂದತ್ಲಾಗೆ ನಮ್ಮನೆಗೆ ನೀರಿಗೆ ಬರಬಾರದು' ಎಂದು ಹೇಳಿದಾಗ ಮಾಲಿಂಗ ಮಗಳನ್ನು ಕರೆದುಕೊಂಡು ಸೂಫಿ ಸಾಹುಕಾರರ ಮನೆಗೆ ಹೋಗಿ ವಿಷಯ ತಿಳಿಸಿ ಅತ್ತು ಬಿಟ್ಟಿದ್ದ. ಆಗ ಮನೆಯವರೆಲ್ಲ..' ಭೂಮಿಯಲ್ಲಿ ಹರಿವ ನೀರು ತೆಗೀಬೇಡ ಅಂತಾರಾ... ಒಂದು ಗುಟುಕು ಕುಡಿವ ನೀರಿಗೆ ತಡೆ ಒಡ್ತಾರಾ...ನಮ್ಮಲ್ಲಿ ನೀರು ಇರುವವರೆಗೂ ಎಷ್ಟು ಬೇಕಾದರೂ ತೆಕ್ಕೋ...' ಎಂದು ಒಪ್ಪಿಗೆ ನೀಡಿದ್ದರು. ಈ ಹಿನ್ನೆಲೆಯಲ್ಲಿ'ನೀರು' ಕತೆಯ ಆಧಾರದಲ್ಲಿ 'ಮತೀಯ ಸಾಮರಸ್ಯ ' ಎಂಬ ವಿಷಯದ ಕುರಿತು ಪ್ರಬಂಧ ಬರೆಯಿರಿ.

| ಮತೀಯ ಸಾಮರಸ್ಯ |
| --- |
| |

# ಹೀಗೊಂದು ಕನಸು ಹೀಗಿದೆ ಜೀವನ

1. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ಪದದಲ್ಲಿ ಉತ್ತರಿಸಿರಿ.

ಅ. 'ಹೀಗೊಂದು ಕನಸು ಹೀಗಿದೆ ಜೀವನ' ಪಾಠವನ್ನು ಬರೆದವರು ಯಾರು ?

ಆ. 'ಹೀಗೊಂದು ಕನಸು ಹೀಗಿದೆ ಜೀವನ' ಇದು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?

ಅ.

ಆ.

2. ವಾಕ್ಯಗಳನ್ನು ರಚಿಸುವಾಗ ಸೂಕ್ತ ಲೇಖನ ಚಿಹ್ನೆಗಳನ್ನು ಸಂದರ್ಭೋಚಿತವಾಗಿ ಅಳವಡಿಸಿದರೆ ವಾಕ್ಯವು ಅರ್ಥಪೂರ್ಣವಾಗುತ್ತದೆ ಮತ್ತು ವಾಕ್ಯದ ಸೌಂದರ್ಯ ಹೆಚ್ಚಾಗುತ್ತದೆ. ಕೆಳಗೆ ನೀಡಲಾದ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿರಿ.

ಅ. ಅಜ್ಜಾ ನಾಳೆ ನಾವು ಸಸಿ ನೆಡೋಣ ನೀವು ನನಗೆ ಕಲಿಸಿಕೊಡುತ್ತೀರಲ್ಲಾ ಎಂದು ರಾಮು ಕೇಳಿದನು

ಆ. ನಾಟಿ ಮಾಡಲೇ ಅಪ್ಪಾ ಅಜ್ಜ ಕಲಿಸುತ್ತಾರೆ ರಾಮು ತಂದೆಯಲ್ಲಿ ಕೇಳಿದನು

ಇ. ಹುರಿಗಾಳು ಚಕ್ಲಿ ವಡೆ ಎಲ್ಲಾ ತಾಜಾ ಇವೆ ಬೇಕೇ ಸ್ವಾಮಿ ಎಂದು ವ್ಯಾಪಾರಿ ಕೇಳಿದನು

ಅ.

| |
|---|
| ಆ.<br><br><br>ಇ.<br><br><br> |

3. ಭಾಷೆಯಲ್ಲಿ ಕೆಲವೊಮ್ಮೆ ಸಂಯುಕ್ತ ವಾಕ್ಯಗಳು ಬರುತ್ತವೆ. ಅಂತಹ ವಾಕ್ಯಗಳನ್ನು ಸರಳ ವಾಕ್ಯಗಳಾಗಿ ವಿಂಗಡಿಸಿದಾಗ ಬಹಳ ಸುಲಭವಾಗಿ ವಾಕ್ಯದ ಆಶಯ ತಿಳಿಯುತ್ತದೆ.ಹಾಗಾದರೆ ಕೆಳಗೆ ನೀಡಿರುವ ಸಂಯುಕ್ತ ವಾಕ್ಯಗಳನ್ನು ಸರಳವಾಕ್ಯಗಳಾಗಿ ವಿಂಗಡಿಸಿ ಬರೆಯಿರಿ.

ಅ. ಬೇವಿನ ಮರವು ಎತ್ತರಕ್ಕೆ ಬೆಳೆದು ನಿಲ್ಲುವಷ್ಟರಲ್ಲಿ ಮನೆಯ ಚಹರೆಯು ಒಂದು ಮಾರ್ದವತೆಯನ್ನು ಪಡೆದುಕೊಂಡಿತು.

ಆ. ಪರಂಪರಾಗತವಾಗಿ ಬಂದ ಗುಡಿಕೈಗಾರಿಕೆಗಳಿಗೆ ಮಹತ್ವವನ್ನು ಕೊಟ್ಟು ಅವನ್ನು ಅಭಿವೃದ್ಧಿಪಡಿಸಿದಾಗ ಜನರ ಬಡತನ ಕಡಿಮೆಯಾದೀತು.

ಇ. ಕಲಿಕೆಯಲ್ಲಿ ಅದಮ್ಯ ಆಸಕ್ತಿ ಹೊಂದಿದ್ದರೂ ರಾಮು ಕೊನೆಗೆ ಹೊಲದಲ್ಲಿ ಬೆಳೆ ಬೆಳೆಸುವ ನಿರ್ಧಾರಕ್ಕೆ ಬರುತ್ತಾನೆ.

| |
|---|
| ಅ.<br><br><br>ಆ.<br><br><br>ಇ.<br><br><br> |

4. ತಂದೆಯ ಆಸೆಯಂತೆ ಸಾಹೇಬನಾಗುವ ಕನಸು ಕಂಡ ರಾಮು ಅಜ್ಜನ ಆಸೆಯಂತೆ ಕೃಷಿಕನಾಗುವ ನಿರ್ಧಾರಕ್ಕೆ ಬರುತ್ತಾನೆ ಎಂಬುದನ್ನು ನೀವು ಓದಿದ್ದೀರಿ. ಇಂತಹ ವಿಷಮ ಸನ್ನಿವೇಶದಲ್ಲಿಯೂ ರಾಮು ಕಲಿಕೆ ಮತ್ತು ಕೃಷಿಯನ್ನು ಜೊತೆಯಾಗಿ ಮುಂದುವರಿಸಲು ತೀರ್ಮಾನಿಸುತ್ತಾನೆ. ಇದರ ಆಧಾರದಲ್ಲಿ ರಾಮುವಿನ ಜೀವನಕ್ಕೆ ಅನ್ವಯವಾಗುವ ಒಂದು ಗಾದೆಮಾತನ್ನು ಆವರಣದಿಂದ ಆರಿಸಿ ಬರೆಯಿರಿ.

(ಮನಸ್ಸಿದ್ದರೆ ಮಾರ್ಗವಿದೆ, ಅತಿ ಆಸೆ ಗತಿಗೇಡು, ಒಗ್ಗಟ್ಟಿನಲ್ಲಿ ಬಲವಿದೆ)

ಈ ಗಾದೆ ಮಾತು ಅವನ ಜೀವನಕ್ಕೆ ಹೇಗೆ ಅನ್ವಯವಾಗುತ್ತದೆ ? ಸಮರ್ಥಿಸಿ ಬರೆಯಿರಿ.

5. 'ಹೀಗೊಂದು ಕನಸು ಹೀಗಿದೆ ಜೀವನ' ಕತೆಯನ್ನು ಓದಿದ್ದೀರಲ್ಲವೇ ? ಅದರಲ್ಲಿ ಎಷ್ಟು ಪಾತ್ರಗಳಿವೆ ? ಯಾವುವು ? ನಿಮಗಿಷ್ಟವಾದ ಪಾತ್ರದ ಪಾತ್ರಚಿತ್ರಣ ಬರೆಯಿರಿ.

6. ಕೃಷಿ ಇಲ್ಲದೆ ಜೀವನವಿಲ್ಲ ಎಂಬುದನ್ನು ನೀವೆಲ್ಲರೂ ತಿಳಿದಿದ್ದೀರಿ. ನಿಮ್ಮ ಮನೆಯಲ್ಲೂ ನೀವು ಕೃಷಿ ಮಾಡುತ್ತೀರಿ ಅಲ್ಲವೇ ? ನೀವು ಮಾಡಿದ ಒಂದು ಕೃಷಿಯ ಕುರಿತು ವಿವರಣೆ ಬರೆಯಿರಿ.

7. ಕೆಳಗೆ ನೀಡಲಾದ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ಭಾಷಾಪ್ರಯೋಗವನ್ನು ಅರ್ಥಮಾಡಿಕೊಂಡು ಬೇರೊಂದು ಸ್ವಂತ ವಾಕ್ಯವನ್ನು ರಚಿಸಿರಿ.

ಅ. ನಾನು ಹೊಲದಲ್ಲಿ ಬೆಳೆ ಬೆಳೆಸುತ್ತೇನೆ ಎಂದು ರಾಮು ಹೇಳಿದಾಗ ಶಿವಗೊವಿನ ಹೃದಯ ತುಂಬಿ ಬಂತು.

ಆ. ಪರೀಕ್ಷೆ ಸಮೀಪಿಸುತ್ತಿದ್ದಂತೆ ಮಕ್ಕಳೆಲ್ಲರೂ ಉತ್ತರಗಳನ್ನು ಉರುಹೊಡೆಯುತ್ತಾರೆ.

| |
|---|
| ಅ.<br><br><br>ಆ.<br><br> |

8.ರಾಮು ಹೊಲದಲ್ಲಿ ಬೆಳೆ ಬೆಳೆಸುವ ನಿರ್ಧಾರಕ್ಕೆ ಬಂದಾಗ ಶೆವಗೊವಿಗೆ ತುಂಬಾ ಸಂತೋಷವಾಗುತ್ತದೆ ಅಲ್ಲವೇ ? ಆಗ ಶೆವಗೊ ಮತ್ತು ರಾಮು ಏನು ಮಾತಾಡಿರಬಹುದು ? ಅವರಿಬ್ಬರೊಳಗೆ ನಡೆದ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

| |
|---|
| ಶೆವಗೋ:<br><br>ರಾಮು:<br><br>ಶೆವಗೋ:<br><br>ರಾಮು:<br><br>ಶೆವಗೋ:<br><br>ರಾಮು:<br><br>ಶೆವಗೋ:<br><br>ರಾಮು:<br><br>ಶೆವಗೋ:<br><br>ರಾಮು: |

9. 'ಹೀಗೊಂದು ಕನಸು ಹೀಗಿದೆ ಜೀವನ'' ಕತೆಯನ್ನು ಓದಿದ್ದೀರಲ್ಲವೇ ? ಹಾಗಾದರೆ ಆ ಕತೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

10. 'ನಿನ್ನ ಅಪ್ಪ ಹೊಲದ ಸಾಹೇಬ. ಅವನ ಕಷ್ಟಕ್ಕೆ ಗೌರವ ನೀಡುವ ಸಲುವಾಗಿ ಹೊಲದ ಸಸಿಗಳೆಲ್ಲಾ ಅರಳಿ ನಿಲ್ಲುತ್ತವೆ ' ಎನ್ನುವ ಶಿವಗೊನ ಮಾತಿನ ಹಿನ್ನಲೆಯಲ್ಲಿ 'ಕೃಷಿಯ ಮಹತ್ವ'ಎಂಬ ವಿಷಯದ ಕುರಿತು ಪ್ರಬಂಧ ಬರೆಯಿರಿ.

11. ನಿಮ್ಮ ಶಾಲೆಯ ಸಾಹಿತ್ಯಸಂಘದ ಆಶ್ರಯದಲ್ಲಿ ನಡೆದ ಕೃಷಿಮಾಹಿತಿ ಶಿಬಿರದ ಉದ್ಘಾಟನ ಕಾರ್ಯಕ್ರಮದ ಬಗೆಗೆ ಕೊಟ್ಟಿರುವ ಮಾಹಿತಿಗಳ ಆಧಾರದಲ್ಲಿ ಪತ್ರಿಕಾ ವರದಿಯನ್ನು ತಯಾರಿಸಿರಿ.

| | | |
|---|---|---|
| ಪ್ರಾರ್ಥನೆ | : | ಕು. ಆದ್ಯ, ಅಮೃತ, ಶ್ವೇತ |
| ಸ್ವಾಗತ | : | ಶ್ರೀ ರಾಮಕುಮಾರ್, ಸಾಹಿತ್ಯಸಂಘದ ಅಧ್ಯಕ್ಷರು. |
| ಅಧ್ಯಕ್ಷತೆ | : | ಶ್ರೀ ಸುಬ್ಬಣ್ಣ ಭಟ್, ಶಾಲಾ ಮುಖ್ಯ ಶಿಕ್ಷಕರು. |
| ಉದ್ಘಾಟನೆ | : | ಶ್ರೀ ವರ್ಗೀಸ್ ಸೆಬಾಸ್ಟಿಯನ್, ಕೃಷಿ ಅಧಿಕಾರಿಗಳು. |
| ಶುಭಾಶಂಸನೆ | : | ಶ್ರೀಮತಿ ಅಶ್ವಿನಿ, ವಾರ್ಡ್ ಸದಸ್ಯೆ, |
| | | ಶ್ರೀ ಜಯದೇವ್, ಶಾಲಾ ವ್ಯವಸ್ಥಾಪಕರು. |
| ಧನ್ಯವಾದ | : | ಕು. ಫಾತಿಮಾ, ಸಾಹಿತ್ಯ ಸಂಘದ ಕಾರ್ಯದರ್ಶಿ. |

'ಕೃಷಿ ಭವನದ ಪ್ರಾಯೋಜಕತ್ವದಲ್ಲಿ ಕೃಷಿ ಸಂಬಂಧಿತ ಸ್ಲೈಡ್ ಶೋ'

12. ‘ಹೀಗೊಂದು ಕನಸು ಹೀಗಿದೆ ಜೀವನ’ ಕತೆಯು ಕೃಷಿಯ ಮಹತ್ವವನ್ನು,ಅಗತ್ಯವನ್ನು ತಿಳಿಸುತ್ತದೆ. ಅದೇ ರೀತಿ ಕೃಷಿಯ ಮಹತ್ವವನ್ನು ಸಾರುವ ಒಂದು ಗಾದೆ ಮಾತನ್ನು ಕೆಳಗೆ ನೀಡಲಾಗಿದೆ.ಅದರ ಅರ್ಥವನ್ನು ವಿವರಿಸಿ ಬರೆಯಿರಿ.

**‘ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು’**

# ವಿಜ್ಞಾನಿಗೆ

1. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ಪದದಲ್ಲಿ ಉತ್ತರಿಸಿರಿ.

ಅ. ವಿಜ್ಞಾನಿಗೆ ಕವನವನ್ನು ಬರೆದವರು ಯಾರು ?

ಆ. ವಿಜ್ಞಾನಿಗೆ ಕವನವನ್ನು ಯಾವ ಕೃತಿಯಿಂದ ಆರಿಸಲಾಗಿದೆ ?

ಇ. 'ಹರಿವ ನೀರೊಳಗೆ ಹುದುಗಿ ಕುಳಿತ <u>ಹೆಮ್ಮಿಂಚ</u> ಹುಡುಕಿದವನೀ' -- ಈ ಸಾಲಿನಲ್ಲಿ ಅಡಿಗೆರೆ ಎಳೆದ ಪದದ ಅರ್ಥ ಬರೆಯಿರಿ.

ಈ. ಸಾವಿರ <u>ಗಾವುದ</u> ದೂರ ಕತೆಯ ಕುಳಿತಲ್ಲಿಯೆ ಕೇಳಿಸುವೆ. ಈ ಸಾಲಿನಲ್ಲಿ ಅಡಿಗೆರೆ ಎಳೆದ ಪದದ ಅರ್ಥ ಬರೆಯಿರಿ.

ಅ.--------------

ಆ. -------------

ಇ. -------------

ಈ. -------------

2. ಕೆಳಗೆ ನೀಡಲಾದ ವಿಜ್ಞಾನಿಗೆ ಕವನದ ಸಾಲಿನ ವಿಶೇಷತೆಯನ್ನು ಬರೆಯಿರಿ.

ಅ. ಬಾನು- ಭೂಮಿಗಳ ಅಳೆದು ಬಳಚುತಿಹೆ.

ಆ. ತಿಂಗಳ ಲೋಕಕೆ ತೆರಳಲು ಕಟ್ಟುತಲಿರುವೆ ನನಸಿನೇಣಿ.

ಅ.

ಆ.

3. ಭಿತ್ತಿಪತ್ರ ಎಂದರೆ ಗೋಡೆಯಲ್ಲಿ ಅಂಟಿಸುವ ಪತ್ರ ಎಂದರ್ಥ. ಭಿತ್ತಿಪತ್ರವು ಸಂಕ್ಷಿಪ್ತವಾಗಿರಬೇಕು ಮತ್ತು ಆಕರ್ಷಣೀಯವಾಗಿರಬೇಕು. ಮುಖ್ಯ ವಿಷಯಗಳನ್ನು ಮಾತ್ರ ಒಳಗೊಂಡಿರಬೇಕು. ಹಾಗಾದರೆ ನಿಮ್ಮ ಶಾಲಾ ವಿಜ್ಞಾನ ಕ್ಲಬ್ ನ ಆಶ್ರಯದಲ್ಲಿನಡೆಯುವ 'ವೈಜ್ಞಾನಿಕ ಉಪಕರಣಗಳ ಪ್ರದರ್ಶನ ಮತ್ತು ಮಾರಾಟ' ದ ಪ್ರಚಾರಕ್ಕಾಗಿ ಭಿತ್ತಿಪತ್ರ ತಯಾರಿಸಿರಿ.

4. ಕೆಳಗೆ ನೀಡಲಾದ ಕವನದ ಸಾಲುಗಳ ಆಶಯವನ್ನು ಬರೆಯಿರಿ.

ಅ. ಗಾಳಿಯನ್ನು ಮನೆಯಾಳಿನಂತೆ ಮಾಡಿದೆಯೋ ಮಾಟಗಾರ
ಜಾಳು ಉಗಿಯೊಳಡಗಿರುವ ಅಮಿತ ಬಲ ಕಂಡ ನೋಟಗಾರ

ಆ. ಮಾನವರಿಗೆ ಬಾನೊಳು ಹಾರಾಡುವ ತ್ರಾಣವಿತ್ತ ಧೀರ--
ಅಣುವಿನೊಳಡಗಿಹ ಅನಂತಶಕ್ತಿಯತುಡುಕಿ ಹಿಡಿದ ವೀರ!

ಅ.

ಆ.

5. ವಿಜ್ಞಾನದ ಕೊಡುಗೆಗಳು ಮಾನವ ಲೋಕಕ್ಕೇ ಒಂದು ವರದಾನವಾಗಿವೆ. ಅಂತಹ ವಿಜ್ಞಾನದ ಮಹತ್ವವನ್ನು ಸಾರುವ ಘೋಷಣ ವಾಕ್ಯಗಳನ್ನು ಬರೆಯಿರಿ.

6. 'ಬಾನು ಭೂಮಿಗಳ ಅಳೆದು ಬಳಚುತಿಹೆ ಧಣು ಧಣು ವಿಜ್ಞಾನಿ' ಎಂಬುದಾಗಿ ಕವಿ ವಿಜ್ಞಾನಿಗಳ ಸಾಧನೆಗಳನ್ನು ಕವನದಲ್ಲಿ ಹೊಗಳಿದ್ದಾರಲ್ಲವೇ ? ಕವನದಲ್ಲಿ ತಿಳಿಸಿರುವ ವಿಜ್ಞಾನಿಗಳ ಸಾಧನೆಗಳನ್ನು ಬರೆಯಿರಿ.

7. ಖ್ಯಾತ ವಿಜ್ಞಾನಿ ವಿಕ್ರಮ್ ಸಾರಾಬಾಯಿ ಅವರ ಜೀವನ ಚರಿತ್ರೆಯ ಭಾಗವನ್ನು ಕೆಳಗೆ ಕೊಡಲಾಗಿದೆ.ಅದನ್ನು ಆತ್ಮಕಥೆಯಾಗಿ ರೂಪಾಂತರಿಸಿ ಬರೆಯಿರಿ.

ವಿಕ್ರಮ್ ಸಾರಾಬಾಯಿ ಅವರು 1919 ಆಗಸ್ಟ್ 12 ರಂದು ಗುಜರಾತದ ಅಹಮದಾಬಾದಿನಲ್ಲಿ ಜನಿಸಿದರು. ಅವರ ಕುಟುಂಬವು ಒಂದು ಪ್ರತಿಷ್ಠಿತ ಶ್ರೀಮಂತ ಕುಟುಂಬವಾಗಿತ್ತು. ಅವರ ತಂದೆಯ ಹೆಸರು ಅಂಬಾಲಾಲ್ ಸಾರಾಬಾಯ್ . ತಾಯಿ ಸರಳಾದೇವಿ. ವಿಕ್ರಮ್ ಅವರು ತುಂಬಾ ಬುದ್ಧಿವಂತ ಮತ್ತು ಚುರುಕಿನ ವಿದ್ಯಾರ್ಥಿ ಆಗಿದ್ದರು. ಅವರು ದೇಶಪ್ರೇಮಿಯೂ ಆಗಿದ್ದರು. ಅವರ ಮನೆಯಲ್ಲಿ ದೇಶದ ಬಗ್ಗೆ, ವಿಜ್ಞಾನದ ಬಗ್ಗೆ ತುಂಬಾ ಚರ್ಚೆಗಳಾಗುತ್ತಿದ್ದುವು. ಇದು ಬಾಲಕನಾದ ವಿಕ್ರಮ್ ನ ಮೇಲೆ ತುಂಬಾ ಪ್ರಭಾವ ಬೀರಿತು. ವಿಶ್ವ ಕವಿ ಶ್ರೀ ರವೀಂದ್ರನಾಥ ಠಾಕೂರವರು ವಿಕ್ರಮ್ ನನ್ನು ಕಂಡು ಈ ಹುಡುಗ ತುಂಬಾ ಖ್ಯಾತಿವಂತನಾಗುತ್ತಾನೆಂದು ಭವಿಷ್ಯ ನುಡಿದಿದ್ದರು. ಅವರ ಭವಿಷ್ಯವಾಣಿಯಂತೆ ವಿಕ್ರಮ್ ಭಾರತದ ಶ್ರೇಷ್ಠ ವಿಜ್ಞಾನಿಯಾಗಿ ಜಗತ್ಪ್ರಸಿದ್ಧಿ ಪಡೆದರು. ವಿಶ್ವಮಟ್ಟದಲ್ಲಿ ಖ್ಯಾತಿ ಹೊಂದಿದರು.

8. ಕೆಳಗೆ ಕೊಟ್ಟಿರುವ ಮಾಹಿತಿಗಳ ಆಧಾರದಲ್ಲಿ ಭಾರತೀಯ ವನಸ್ಪತಿ ವಿಜ್ಞಾನದ ಜನಕ ಡಾ. ಬೀರಬಲ್ ಸಾಹನಿ ಅವರ ವ್ಯಕ್ತಿ ಪರಿಚಯವನ್ನು ಬರೆಯಿರಿ.

ಹೆಸರು : ಡಾ . ಬೀರಬಲ್ ಸಾಹನಿ

ಜನ್ಮ ಸ್ಥಳ : ಪಶ್ಚಿಮ ಪಂಜಾಬದ ಶಾಹಪೂರ ಭೇರ

ಜನನ : 1891 ನವೆಂಬರ್ 14

ತಂದೆ : ಲಾಲಾ ರುಚಿರಾಂ ಸಾಹನಿ

ತಾಯಿ : ಈಶ್ವರಿ ದೇವಿ

<u>ವಿದ್ಯಾಭ್ಯಾಸ :</u> ಲಾಹೋರಿನ ಸರಕಾರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ, 1911 ರಲ್ಲಿ ವಿಶ್ವವಿದ್ಯಾಲಯದಿಂದ ಬಿ ಎಸ್ ಸಿ ಪದವಿ, ಕೇಂಬ್ರಿಜ್ ಗೆ ಹೋಗಿ ಬಾಟನಿ ಶಾಲೆಯಲ್ಲಿ ವನಸ್ಪತಿ ಶಾಸ್ತ್ರದ ಪ್ರೊ. ಸ್ಪಿರ್ಡರ ನಿರ್ದೇಶನದಲ್ಲಿ ಸಂಶೋಧನಾ ಕಾರ್ಯ, ಲಂಡನ್ ವಿಶ್ವವಿದ್ಯಾಲಯದಲ್ಲಿ ಎಂ ಎಸ್ ಸಿ ಪದವಿ.

<u>ಉದ್ಯೋಗ :</u> ವಾರಣಾಸಿ ಮತ್ತು ಪಂಜಾಬ ವಿಶ್ವವಿದ್ಯಾಲಯಗಳಲ್ಲಿ ಸಸ್ಯಶಾಸ್ತ್ರ ಪ್ರಾಧ್ಯಾಪಕರು, ಲಕ್ನೋ ವಿಶ್ವವಿದ್ಯಾಲಯದಲ್ಲಿ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು.

<u>ಸಾಧನೆ</u> : ಪುರಾತನ ನಾಣ್ಯ ತಯಾರಿಕಾ ಪದ್ಧತಿ ಎಂಬ ಪುಸ್ತಕ ರಚನೆ. ಗೊಂಡ್ವಾನ ಎಂದು ಕರೆಯಲ್ಪಡುವ ಸಸ್ಯಗಳ ಅಧ್ಯಯನ ನಡೆಸಿ ಅದರ ಕುರಿತಾದ ಮಹತ್ವದ ಗ್ರಂಥ ಪ್ರಕಟಣೆ, 1946 ರಲ್ಲಿ ಲಕ್ನೋದಲ್ಲಿ ಪ್ರಾಕ್ ಸಸ್ಯ ವಿಜ್ಞಾನ ಸಂಘಸ್ಥಾಪನೆ.

<u>ಗೌರವ, ಪ್ರಶಸ್ತಿ</u>: 1919 ರಲ್ಲಿ ಸಸ್ಯಗಳ ರೂಪ, ರಚನೆ ಮತ್ತು ಅಂಗರಚನೆಯ ಅಧ್ಯಯನಕ್ಕಾಗಿ ಲಂಡನ್ ವಿಶ್ವವಿದ್ಯಾಲಯದಿಂದ ಗೌರವಡಾಕ್ಟರೇಟ್ ಪ್ರಶಸ್ತಿ, ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಣೆ, ರಾಷ್ಟ್ರೀಯ ವಿಜ್ಞಾನ ಶಿಕ್ಷಣಸಂಸ್ಥೆಯ ಉಪಾಧ್ಯಕ್ಷರು, ಭಾರತೀಯ ವಿಜ್ಞಾನ ಅಭಿವೃದ್ಧಿ ಸಂಸ್ಥೆಯ ಉಪಾಧ್ಯಕ್ಷರು, ಕ್ರೋನಿಕಾ ಬಟಾನಿಕಾ ಸಸ್ಯವಿಜ್ಞಾನ ಪತ್ರಿಕಾ ಸಂಪಾದಕರಾಗಿ ಮಂಡಳಿಯ ಸದಸ್ಯರಾಗಿ ರಾಯಲ್ ಸೊಸೈಟಿಯ ಸದಸ್ಯರಾಗಿ ಕಾರ್ಯನಿರ್ವಹಣೆ

ನಿಧನ : 1949 ಎಪ್ರಿಲ್ 10

<u>ಡಾ. ಬೀರಬಲ್ ಸಾಹನಿ</u>

9. ಕೆಳಗಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಪದಕ್ಕೆ ಸಂವಾದಿಯಾದ ಕನ್ನಡ ಪದವನ್ನು ಬರೆದು ಒಂದು ವಾಕ್ಯ ತಯಾರಿಸಿರಿ

ಮೊಬೈಲ್ ನ ಆಗಮನದಿಂದ ಜನರಲ್ಲಿ <u>ಟೆಲಿವಿಷನ್</u> ನೋಡುವ ಆಸಕ್ತಿಯು ಕಡಿಮೆಯಾಗಿದೆ.

| |
|---|
| |

10. ಕೆಳಗೆ ಕೊಡಲಾದ ಸಂಯುಕ್ತ ವಾಕ್ಯವನ್ನು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

ವಿಜ್ಞಾನದ ಪದ್ಧತಿಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದರಿಂದ ಮಾನವನ ಶ್ರಮವು ತುಂಬಾ ಕಡಿಮೆಯಾಗುತ್ತದೆ.

| |
|---|
| |

11. ವಿಜ್ಞಾನಿಗೆ ಕವನದಲ್ಲಿ ವಿಜ್ಞಾನದ ಕೆಲವೊಂದು ಆವಿಷ್ಕಾರದ ಕುರಿತು ನಾವು ತಿಳಿದುಕೊಂಡಿದ್ದೇವೆ.ಈ ಹಿನ್ನಲೆಯಲ್ಲಿ 'ಮಾನವ ಲೋಕಕ್ಕೆ ವಿಜ್ಞಾನದ ಕೊಡುಗೆ ' ಎಂಬ ವಿಷಯದ ಕುರಿತು ಕೆಳಗೆ ನೀಡಲಾದ ಹೆಗ್ಗುರುತುಗಳ ಆಧಾರದಲ್ಲಿ ಪ್ರಬಂಧ ತಯಾರಿಸಿರಿ.

ಹೆಗ್ಗುರುತುಗಳು : ದೈನಂದಿನ ಜೀವನದಲ್ಲಿ ಬಳಸುವ ಸಲಕರಣೆಗಳು, ಕೃಷಿ, ವೈದ್ಯಕೀಯ, ಕೈಗಾರಿಕೆ ಮೊದಲಾದ ಕ್ಷೇತ್ರಗಳ ಸಾಧನೆ ...ಇತ್ಯಾದಿ ಅಂಶಗಳನ್ನೊಳಗೊಂಡಿರಬೇಕು.

| |
|---|
| |

GENERAL EDUCATION DEPARTMENT

SAMAGRA SHIKSHA, KERALA